ಮೈಮರೆತು ನಿಲ್ಲುತ್ತಾನೆ. ತನಗಾಗಿ ತೆರೆದ ಪುಟವೇ ಇದೆನ್ನುವ ಹಾಗೆ, ಇಡೀ ಜಗತ್ತನ್ನು ಓದುತ್ತಾನೆ. ಸುತ್ತಲಿನ ಬದಿಹೋಕರೂ ಇವನ ಕಂಗಳಲ್ಲಿ ಪಠ್ಯವಾಗುತ್ತಾರೆ. ಎದುರಿಗಿದ್ದೂ ಯಾರಿಗೂ ಢಾಳಾಗಿ ತೋರಿಕೊಳ್ಳದೆ, ಬೆನ್ನೊರಗಿಸಿ ಕಂಬಾವಲಂಬಿಯಾಗಿಯೇ ಇರುತ್ತಾನೆ. ಬಲ್ಲವರು ಮಾತ್ರ ಇವನನ್ನು 'ಸಂತೆಯ ಸಂತ'ನೆಂದು ಗುರುತಿಸುತ್ತಾರೆ.

ಆ ಕಾಲದ ಫ್ರಾನ್ಸು ಇವನಿಗೆ ಹೇಳಿಮಾಡಿಸಿದಂತಿದೆ! ಅದೇ ಇವನನ್ನು ಸೃಜಿಸಿತೋ, ಇವನೇ ಅದನ್ನು ಸೃಜಿಸಿದನೋ ತಿಳಿಯಗೊಡದೆ ಅನಾಮಿಕಾಮುಖವಾಗಿ ಎಲ್ಲೆಂದರಲ್ಲಿ ಇದ್ದಾನೆ. ಇರುತ್ತಾನೆ. ತತ್ಕಾಲೀನ ಸಾಹಿತ್ಯವು ಇವನನ್ನೊಂದು ಬೌದ್ಧಿಕ ಪ್ರತಿಮೆಯೆಂಬಂತೆ ಟಂಕಿಸಿಟ್ಟಿದೆ. ಬಾಡಿಲೇರನನ್ನು ನೆನಪಿಸಿಕೊಳ್ಳಿ. ಹಾಗೇ ಅವನ ಬಿಡಾಡಿತನವನ್ನೂ!

ಇಂಡಿಯಾದ ಸಂದರ್ಭದಲ್ಲಿ, ಬಿಡಾಡಿಕೆಯ ನಿಮಿತ್ತದಲ್ಲಿ ಅಮೀರ್ ಖುಸ್ರುವನ್ನು ನೆನೆಯಬಹುದು. ಅಥವಾ, ದಿಲ್ಲಿಯ ಬೀದಿಗಳಲ್ಲಿ ಬಿಡಾಡಿಕೊಂಡಿದ್ದ ಘಾಲಿಬ್‌ನನ್ನು. ತೀರಾ ಇತ್ತೀಚಿನ ಸಾದತ್ ಹಸನ್ ಮಾಂಟೋ ಕೂಡ ಹೀಗೆಯೇ; ಬೊಂಬಾಯಿಯ ಪೇಟೆಗಳಲ್ಲಿ ಅಲೆದಲೆದುಕೊಂಡು ಕತೆ ಬರೆದವನು... ಅಥವಾ ಪ್ಯಾಸಾ ಸಿನಿಮಾದ ಗುರುದತ್... ಇವರೆಲ್ಲರೂ ಶಹರದೊಳಗಿದ್ದೂ ಇದ್ದಿರದ ಚಿತ್ರಗಳು. ಶಹರದೊಡನೆ ಹೊಸೆಬೆಸೆದುಕೊಂಡವರು. ಅದಿಲ್ಲದೆ ಖುದ್ದಿಲ್ಲ ಅನ್ನುವಂತಿದ್ದವರು.

ಹಾಡು, ಕವಿತೆ, ಶಾಯಿರಿ... ಪೊಎಟ್ರಿ... ಇವೆಲ್ಲವೂ ಜನನಿಬಿಡ ಗಲ್ಲಿಗಳಲ್ಲಿ ಹುಟ್ಟುವಾಗ್ಗಿನ ಸೊಗಸೇ ಬೇರೆ! ಲೋಗರು ಮನ್ನಿಸದ ಅನಾಚಾರಗೈಯುತ್ತ ಅಂಡಲೆಯುವ ಗಮ್ಮತ್ತೇ ಇನ್ನೊಂದು! ಅವರು ಹೇಳುವ ಸನ್ನಡತೆಯನ್ನು ಕೆಣಕುವುದು ಪಾಪವೇನೋ ಹೌದು; ಆದರೆ ಪಾಪ ಮಾಡುವುದರಲ್ಲಿ ಯಾಕಿಂಥ ಸುಖವಿದೆ? ಯಾತಕೀ ಪರಿ ಮದವಿದೆ? ಮತ್ತು ಈ ಮದವೇಕೆ ಮುದದಾಯಿಯಾಗಿದೆ?

ಎಲ್ಲೋ ಓದಿದ್ದು ನೆನಪಾಗುತ್ತದೆ. 'ಹಾದರ ಪ್ರತಿ ಮನುಷ್ಯನ ಬೌದ್ಧಿಕ ಹಕ್ಕೇ ಆಗಿದೆ. ಒಂಟಿತನ ಭಯಾನಕವೆನಿಸುತ್ತದೆ. ಎಂತಲೇ ಅವನು ಎರಡಾಗಬಯಸುತ್ತಾನೆ. (ಎರಡು ಆಗಬಯಸುತ್ತಾನೆ.) ಆದರೆ ಅವನ ಜೀನಿಯಸ್ಸು ಒಂದೇ ಆಗಿರಬಯಸುತ್ತದೆ. ಒಂಟಿಯಿರಬೇಕೆನಿಸಗೊಡುತ್ತದೆ.' ಈ ಪರಿ ಇಮ್ಮನಸ್ಸಿನಲ್ಲಿಯೇ ಬಿಡಾಡಿಯು ಸದಾ ತೊಳಲುತ್ತಾನೆ. ಈ ಡೈಕಾಟೊಮಿಯೇ ಬದುಕೆನಿಸುತ್ತದೆ. ಒಬ್ಬಂಟಿತನದ ಭಯ ವ್ಯಭಿಚಾರಕ್ಕೆಳಿಸುತ್ತದೆ. ಹಾದರದಲ್ಲಿ ತೊಡಗಿಸುತ್ತದೆ. ಸ್ವದೇಹಾಚೆಗಿನ ಇನ್ನೊಂದು ದೇಹದೊಡನಾಡಬಯಸುತ್ತದೆ. ಅಸಲಿನಲ್ಲಿ ಜಗತ್ತಿನ ಪ್ರೀತಿಯಷ್ಟೂ ಹಾದರವೇ! ಯಾಕೆಂದರೆ ಮೈತುಷ್ಟಿಯಿಲ್ಲದ ಪ್ರೀತಿಯೇ ಸುಳ್ಳು!

ಹಾಗೆ ನೋಡಿದರೆ ಪ್ರತಿಯೊಂದು ಪ್ರೀತಿಯೂ ಬಿಡಾಡಿಯೆ. ತಾನೂ ಎರ್ರಾಬಿರ್ರಿ ಅಂಡಲೆಯುತ್ತದೆ. ತಾನುಂಟಾದ ಮನಸ್ಸನ್ನೂ ಅಂಡಲೆಸುತ್ತದೆ. ಈ ಪ್ರೀತಿಯನ್ನು ಮಟ್ಟ ಹಾಕಲಿಕ್ಕೆಂದೇ ಲೋಗರು ಮದುವೆಯೆಂದೊಂದು ಕಟ್ಟಳೆ ಹುಟ್ಟಿಸಿದರೆನಿಸುತ್ತದೆ. ಆದರೆ ಮದುವೆಯೊಂದರಲ್ಲೊಳಪಟ್ಟವರು ನಿಜಕ್ಕು ಪ್ರೀತಿಸುತ್ತಾರೆಯೆ? ಸುಖಿಯಿದ್ದಾರೆಯೆ?

ಪ್ರೀತಿಯೊಂದು ಲೇವಾದೇವಿ ಅಷ್ಟೆ ಕೊಡುವುದು, ಇಸಕೊಳ್ಳುವುದು. ನೂರಕ್ಕೆ ನೂರು ಗಂಡಸಾದವನು ಸದಾ ಕೊಡುತ್ತಾನೆ. ಸಲಿಂಗಿಯಿರಲಿ, ವಿಲಿಂಗಿಯಿರಲಿ ಕೊಡುತ್ತಾನೆ. ನಿಜವಾದ ಕೊಡುಗೆ ಜರುಗುವುದು ಅವನ ಗಂಡೊಡಲು ಇನ್ನೊಂದನ್ನು ಹೊಕ್ಕಾಗ ಮಾತ್ರ.

ಈ ನಡುವೆ ಕಲೆಯ ಕುರಿತಾಡುವುದಾಗುತ್ತದೆ. ಮನುಷ್ಯನು ಕಲೆಗೆ ಶರಣಾದಾಗ ಅಥವಾ